ಸಾಕ್ಷಾತ್ ಎರಡನೇ ರಾಣಿ ದೇವಿ ಬೌದ್ಧಧರ್ಮದ ಹಿನ್ನೆಲೆಯಿಂದ ಬಂದರೂ ಅವಳಿಗೆ ಅಶೋಕ ಮಹಾರಾಜರನ್ನು ಬೌದ್ಧಧರ್ಮದ ತೆಕ್ಕೆಗೆ ತರಲು ಸಾಧ್ಯವಾಗಿರಲಿಲ್ಲ. ಆದರೆ, ಮಕ್ಕಳಾದ ಸಂಘಮಿತ್ರೆ ಮತ್ತು ಮಹೇಂದ್ರ ಬೌದ್ಧ ಶಾಲೆಯ ವಿಶ್ವವಿದ್ಯಾಲಯದಲ್ಲಿ ಓದಲು, ಅಭ್ಯಾಸ ಮಾಡಲು ಅನುಮತಿ ಕೊಡಲಾಗಿತ್ತು. ಅದು ದೇವಿಯ ಇಚ್ಛೆಯಾಗಿತ್ತು ಕೂಡ. ಅದನ್ನು ಅಶೋಕಪ್ರಭು ನೆರವೇರಿಸಿದ್ದರು. ಈಗ ಬೌದ್ಧಗುರುವನ್ನು ನೋಡಿಕೊಳ್ಳಲು ಸಾಕ್ಷಾತ್ ಎರಡನೇ ಪಟ್ಟದರಸಿ, ದೇವಿಯನ್ನು ನಿಯಮಿಸಲಾಯಿತು.

ಕೆಲಸಮಯದ ನಂತರ ಅಶೋಕ ಚಕ್ರವರ್ತಿಗಳೇ ಕೇಳಿದರು:

'ತಾವು ಎಲ್ಲಿಂದ ಬಂದಿರಿ?'

'ಕೋಸಲ ದೇಶದಿಂದ.'

'ನಮ್ಮಲ್ಲಿ ಬರಲು ಕಾರಣ?'



'ನಾವಾಗಿಯೇ ಬಂದಿಲ್ಲ. ನನ್ನ ಕಾಲುಗಳು ಬಲಾತ್ಕಾರವಾಗಿ ಈ ಅರಮನೆಯನ್ನು ಪ್ರವೇಶಿಸಿದವು.'

'ನಮ್ಮಿಂದ ಏನಾಗಬೇಕು?'

'ನನ್ನಿಂದ ನಿಮ್ಮ ಕೊಲೆಯಾಗಬೇಕು.'

ಚಕ್ರವರ್ತಿಯ ಕಾಲುಗಳು ಕುಸಿದು ಬಿದ್ದವು, ಬಾಯಿ, ತುಟಿ ಅದುರಹತ್ತಿತು.

'ಅಹಿಂಸೆಯ, ಧರ್ಮವನ್ನು ಹೊದ್ದುಕೊಂಡು ಬಂದ ನಿಮ್ಮ ಬಾಯಿಯಲ್ಲಿ ಇಂತಹ ಮಾತೇ?'

'ಕೊಲೆಗಳಲ್ಲಿ ಸಾವಿರಾರು ವಿಧಗಳು ಇವೆ' ಎಂದು ನಗುತ್ತಲೇ ಹೇಳಿ, ಹಾಸಿಗೆ ಇಲ್ಲದೆ ಅರಮನೆ ಪ್ರಾಂಗಣದಲ್ಲಿ ಪವಡಿಸಲು ಹೊರಟರು.

'ನಿಲ್ಲಿ, ಗುರುವೇ ತಮ್ಮ ಹೆಸರು ಹೇಳಲಿಲ್ಲ?'

ನನ್ನ ಹೆಸರು ನಿಗ್ರೋಧ, ನಿಗ್ರೋಧ ಧಮ್ಮ ಎಂದು ಉತ್ತರಿಸುತ್ತಲೇ, 'ಬುದ್ಧಂ ಶರಣಂ ಗಚ್ಛಾಮಿ' ಎಂದು ನಡೆದೇಬಿಟ್ಟರು.

'ನನ್ನಿಂದ ನಿಮ್ಮ ಕೊಲೆಯಾಗಬೇಕು' ಎಂಬ ವಾಕ್ಯ ಅರಮನೆಯ ತುಂಬಾ ಹರಿದಾಡಿ, ಜೋರಾಗಿ ಪ್ರತಿಧ್ವನಿಸಿತು. ಮತ್ತು ಕೋಸಲ ದೇಶ ಅಂದರೆ ಸುಶೀಮನ ಹೆಂಡತಿ ಚಂದಾ ಕೋಸಲದ ಬೌದ್ಧ ವಿಹಾರದಲ್ಲಿ ನೆಲೆಸಿದ್ದಾಳೆ ಮತ್ತು ಅವಳಿಗೆ ಒಬ್ಬ ಮಗನಿದ್ದಾನೆ ಎಂಬ ಗೂಢಚಾರ ಮಾಹಿತಿ ಅಸಾಂಧಿಮಿತ್ರಳಿಗೆ ಇತ್ತು. ಅಂತಃಪುರದಲ್ಲಿ ಆಗಲೇ ಪವಡಿಸಿದ್ದ ಅಸಾಂಧಿಮಿತ್ರಳ ಕಿವಿಗೂ ಇದು ಬಿದ್ದು ದಡ್ಡನೆ ಎದ್ದು ರಾಜ ಸಭಾಂಗಣಕ್ಕೆ ಬಂದಳು. ಮತ್ತೆ ದೇವಿಯೇ ಮಧ್ಯ ಪ್ರವೇಶಿಸಿ ಭವಾಂತರದಲ್ಲಿ ಮನುಷ್ಯ ಅನೇಕ ಸಲ ಹುಟ್ಟು- ಸಾವುಗಳನ್ನು ನೋಡುತ್ತಾನೆ, ಬೌದ್ಧ ತಾತ್ವಿಕತೆಯಲ್ಲಿಯೂ ಮನುಷ್ಯನ ಮನಸ್ಸನ್ನು ಕೊಲ್ಲಿಸಿ ಹೊಸ ಮನಸ್ಸು ಪ್ರತಿಷ್ಠಾಪಿಸುವುದು ಇದೆ. ವಿಕಸನದ ಮರುಹುಟ್ಟು ಪಡೆಯಲು ಅವಕಾಶವಿದೆ ಎಂದು ಹೊಸ ವ್ಯಾಖ್ಯಾನ ಕೊಟ್ಟಳು.

ಆಗಲೇ ಆ ಕಿರಿಯ ಬಿಕ್ಕು ಹೊರಟು ಹೋಗಿದ್ದ. ಅಸಾಂಧಿಮಿತ್ರೆ ರಾಜಾಂಗಣಕ್ಕೆ ಬಂದು ನಿಂತಿದ್ದಳು.

ಆ ಬಿಕ್ಕು ಮಾತಾಡಿದ್ದು ಬಹುಭಾರವಾದ ಮಾತು.

ಯಾರ ಕೊಲೆಯಾಗಬೇಕು? ಮಹಾರಾಜರ ಕೊಲೆಯಾಗಬೇಕು.

'ದೇವಿ ನೀನು ಎಲ್ಲರನ್ನೂ ನಂಬುತ್ತಿ. ಎಲ್ಲರನ್ನೂ